


ನ್ಯೂಯಾರ್ಕ್‌ನಲ್ಲಿ ವಿಂಡೊ ಥಿಯೇಟರ್ ಎಂದರೆ ಜನ ಜಾತ್ರೆ. ಇಲ್ಲಿ ನಾಟಕೀಯತೆಯ ತಾಪತ್ರಯ ಇಲ್ಲವೇ ಇಲ್ಲ. ಏನಿದ್ದರೂ ಸಹಜಾಭಿನಯ. ಡಿಸೈನರ್ ಡ್ರೆಸ್ ಮಳಿಗೆಯ ಗಾಜಿನ ಪರದೆಯೊಳಗೆ ಇಬ್ಬರು ರೂಪದರ್ಶಿಗಳಿಗೆ ಮತ್ತೇನೂ ಕೆಲಸವಿಲ್ಲ. ಉಡುಪುಗಳನ್ನು ಕಳಚುವುದು, ಬಿಚ್ಚುವುದು.. ಹೀಗೆ ಎರಡೇ ಕೆಲಸ. ಆದರೆ ಹೊರಗಿದ್ದವರಿಗೆ ಕಣ್ತುಂಬ ಕೆಲಸ. ಗ್ರಾಹಕರು ಉಡುಪು ಖರೀದಿಸುವುದು ಅನುಮಾನ. ಏಕೆಂದರೆ ಉಡುಪಿಲ್ಲದ ನೀರೆಯೇ ಚೆಂದ ಎಂದು ನೆರೆದವರು ಲೊಚಗುಟ್ಟಿದರಂತೆ.

ಜಕಾರ್ತಾದ ಸೂಪರ್‌ವೊನೊ ಸೂಪರ್ ಮ್ಯಾನ್ ಆಗಲಿಕ್ಕೆ ಹೊರಟಿದ್ದ. ಅದ್ಯಾವ ಮೀಟರ್ ಟೇಪ್‌ನಲ್ಲಿ ಅಳೆದನೋ, 2.71 ಮೀಟರ್ ಎಂದು ಹೇಳಿಕೊಂಡು ಓಡಾಡಿದ್ದ. ದಾಖಲೆ ಹುಚ್ಚಿನ ಜನ ಅಳತೆ ಪಟ್ಟಿ ಹಚ್ಚಿಯೇ ಬಿಟ್ಟರು. ಟರ್ಕಿಯ ಜಿರಾಫೆ ಮನುಷ್ಯ ಕೊಸೆನ್ (2.47 ಮೀಟರ್)ಗಿಂತ 5 ಸೆಂ.ಮೀ. ಖೋತಾ ಬಿತ್ತು. ಟರ್ಕಿಯ ಅಳತೆ ಪಟ್ಟಿಗಿಂತ ಜಕಾರ್ತಾದ ಪಟ್ಟಿಯಲ್ಲಿ ಸೆಂ.ಮೀ. ಉದ್ದ ಜಾಸ್ತಿ ಎಂದು ಸಾಬೀತಾಯ್ತು ಅಷ್ಟೆ.





ಇದು ಸಾಮಾನ್ಯ ಜೋಳವಲ್ಲ. ಬೇಯಿಸಿದ ನಂತರ ಬಾಯಲ್ಲಿಟ್ಟು ಅಗಿದು, ಉಗಿದು ಪುನಃ ಕೊಳೆಸಿದ ನಂತರ ಭಟ್ಟಿ ಸೇರುತ್ತದೆ. ಅಲ್ಲಿ ತಯಾರಾಗುವ ಮದ್ಯ ಬಹಳ ಕಿಕ್ ಕೊಡುತ್ತದಂತೆ. ಅಡ್ಡೆಯೆಲ್ಲಿ ಎಂದು ಹುಡುಕಿ ಹೊರಡುವ ಪಾನಪ್ರಿಯರಿಗೊಂದು ಸಣ್ಣ ಮಾಹಿತಿ- ಇದು ತಯಾರಾಗುವುದು ದ.ಅಮೆರಿಕದಲ್ಲಿ.

ಬಲ್ಗೇರಿಯಾದ ಈ ಬರಿಮೈ ಗಂಡಸರು ಮಂಜುಗಡ್ಡೆಯಿರುವ ನೀರಿಗೆ ಜಿಗಿದಿರುವುದು ಅಲ್ಲಿರುವ ಕ್ರಾಸ್ ಕೈಗೆತ್ತಿಕೊಳ್ಳಲು. ಯಾರಿಗೆ ಸಿಗುತ್ತದೊ ಅವರು ವರ್ಷ ಪೂರ್ತಿ ಕಾಯಿಲೆಯಿಂದ ದೂರವಿರುತ್ತಾರೆಂಬ ನಂಬಿಕೆ. ವರ್ಷದಿಂದ ವರ್ಷಕ್ಕೆ ಭಾಗವಹಿಸುವವರು ಜಾಸ್ತಿಯಾಗುತ್ತಿದ್ದಾರಂತೆ.



ವಿಶ್ವದ ಶ್ರೀಮಂತ ಫುಟ್ಬಾಲ್ ಕ್ಲಬ್ ಸ್ಪೇನ್‌ನ ರಿಯಲ್ ಮ್ಯಾಡ್ರಿಡ್ ದುಡ್ಡು ಮಾಡಲು ಚೆಂಡನ್ನು ನಂಬಿಕೊಂಡು ಕುಳಿತಿಲ್ಲ. ಜೆರ್ಸಿ, ಟೀಷರ್ಟ್ ಎಂದೆಲ್ಲಾ ವ್ಯಾಪಾರಕ್ಕೆ ಕುಳಿತಿರುವ ಕ್ಲಬ್ ಈಗ ಹೆಂಗಳೆಯರ ಒಳ ಉಡುಪನ್ನು ಬಿಡುಗಡೆ ಮಾಡಿದೆ. ಫುಟ್ಬಾಲ್ ಎಂದರೆ ಹುಚ್ಚೇರುವ ಸ್ಪೇನಿನವರು ಮನೆಯಿಂದ ತಯಾರಿ ನಡೆಸಿಕೊಂಡು ಬರುವ ಬದಲು ಕ್ರೀಡಾಂಗಣದಲ್ಲೇ ಖರೀದಿಸಿ, ಉಟ್ಟು, ಕಳಚಿ ಕುಣಿದಾಡಬಹುದು.

ಹರ್‍ಯಾಣದಲ್ಲಿ ಬಸ್ ಕಂಡಕ್ಟರ್‌ಗಳ ಬ್ಯಾಗಿಗೆ ಕೈ ಹಾಕಬೇಡಿ, ಹುಷಾರ್! ಕರೆಂಟ್ ಷಾಕ್‌ನ ಕಿರುಚುವಿಕೆ ಜೊತೆ ಅಲಾರ್ಮ್‌ನ ಒದರಾಟ. ಬಸ್‌ನ ನೂಕುನುಗ್ಗಲಿನಲ್ಲಿ ಕಂಡಕ್ಟರ್ ಚೀಲ ಕಳವು ಮಾಡುವ ಕಳ್ಳರಿಗೆ ಬುದ್ಧಿ ಕಲಿಸಲು ಅಲ್ಲಿಯ ರಾಜ್ಯ ಸಾರಿಗೆ ಸಂಸ್ಥೆ ಹೊರಟಿದೆ. ಇದನ್ನು ಪೂರೈಸುವ ಜಾಲದಲ್ಲಿ ಇನ್ನೆಷ್ಟು 'ಒಳ' ಕಳ್ಳರು ಸೇರಿಕೊಳ್ಳುತ್ತಾರೊ?



ಇಂಗ್ಲೆಂಡ್‌ನ ಈ ನಾಯಿ ಸೂಪರ್‌ಮಾಮ್. ಒಂದೇ ಬಾರಿ 18 ಮರಿಗಳು. ಅದೂ ಜೀವಂತ. ಇದು ವಿಶ್ವದಾಖಲೆಯಂತೆ. ನಾಯಿಯೇನೂ ತಾಯ್ತನದಿಂದ ಬೀಗುತ್ತಿದೆ. ಅದರ ಮಾಲೀಕರೂ ಬೀಗುತ್ತಿದ್ದಾರೆ- ಅಪರೂಪದ ತಳಿಯ ಒಂದೊಂದು ಮರಿಗೂ ಎಷ್ಟು ಬೆಲೆ ಸಿಗಬಹುದು ಎಂಬ ಲೆಕ್ಕಾಚಾರದಿಂದ. ಬೆಂಗಳೂರಿನ ಬೀದಿನಾಯಿಗಳಿಗೆ ಏನಾದರೂ ಈ ಭಾಗ್ಯ ಸಿಕ್ಕಿಬಿಟ್ಟರೆ..

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65